# ನವಿಲುಗನ್ನಡಿ

ಎಂದಿನಂತೆ ಈ ಸಂಚಿಕೆಯೂ ವಿಶೇಷ, ವಿನೂತನ. ನನ್ನ ಕಥಾಪ್ರಸಂಗ, ನವಿಲುಗರಿ, ಮಾತು–ಕತೆ, ನಂದಾದೀಪ, ಚಿತ್ರಪಟ... ಒಂದಕ್ಕಿಂತ ಒಂದು ಆಕರ್ಷಕ ಶೀರ್ಷಿಕೆಗಳು. ಪ್ರತಿಯೊಂದು ಬರಹವೂ ಸೂಜಿಗಲ್ಲಿನಂತೆ ಸೆಳೆಯುತ್ತದೆ. ಒಂದು ಪುಟ್ಟ ಸಂಚಿಕೆಯಲ್ಲಿ ಎಷ್ಟೊಂದು ವೈವಿಧ್ಯತೆಗಳು ಎನ್ನುವ ಅಚ್ಚರಿ.

**ಸಿ. ಹೇಮಲತಾ, ಮೈಸೂರು**




'ಮಯೂರ' ಹತ್ತಾರು ತೊರೆಗಳ ಸಂಗಮವಾಗಿ ಮರುಹುಟ್ಟು ಪಡೆಯುತ್ತ ಬರುತ್ತಿರುವುದು ಸ್ವಾಗತಾರ್ಹ. ನಮ್ಮನ್ನಗಲಿದ ಸುಮತೀಂದ್ರ ನಾಡಿಗ, ವ್ಯಾಸರಾವ್ ಕುರಿತ ಬರಹಗಳು ಪತ್ರಿಕೆಯ ಘನತೆಯನ್ನು ಹೆಚ್ಚಿಸಿವೆ. ಸಪ್ನಾ ಕಟ್ಟಿ ಅವರ ಕತೆಗೆ ಶೀರ್ಷಿಕೆ (ಧರೆಗೆ ದೊಡ್ಡವರು) ಬಹಳ ಭಾರವಾಯಿತು ಎಂದೆನಿಸಿತು.

**ಸರ್ವಜಿತ, ಹುಬ್ಬಳ್ಳಿ**

ಈ ಸಂಚಿಕೆಯ 'ಹತ್ತಾರು ತೊರೆಗಳು' ಸಂಪಾದಕೀಯ ನುಡಿ ಅರ್ಥಪೂರ್ಣ. ಬೇರೆ ರಂಗಗಳ ಚಿಂತನೆಗಳು ಒಂದಕ್ಕೊಂದು ಪೂರಕ ಎನ್ನುವುದು ನಿಜ. ನಾವು ಗಾಂಧೀಜಿಯವರ ಚಿಂತನಾಕ್ರಮವನ್ನು ಅರಿಯದಿದ್ದರೆ, ಸಾಹಿತ್ಯದ ಹೆಚ್ಚುಗಾರಿಕೆ ಅರಿವಿಗೆ ಬರುವುದಿಲ್ಲ.

**ಶೂದ್ರ ಶ್ರೀನಿವಾಸ್, ಬೆಂಗಳೂರು**

ನಾಗರಾಜ ವಸ್ತಾರೆ ಅವರ 'ತೋಳ – ಕುರಿಮರಿಯ ಕತೆ' ಇಷ್ಟವಾಯಿತು.

**ಕೊಹಿಮ, ಬಸರಕೋಡು**

ಸಿನಿ ನಿರ್ದೇಶಕ ಸೂರಿ ಸಂದರ್ಶನ 'ಬಿರಿಯಾನಿ ಸ್ಪೆಷಲಿಸ್ಟ್' ಸೊಗಸಾಗಿದೆ.

**ಬೀರೇಗೌಡ ಪಿ., ಮೈಸೂರು**

ಡಾ. ಜಿ.ವಿ. ಆನಂದಮೂರ್ತಿ ಅವರ 'ನಮ್ಮೂರಿನ ಸಂತರು' ಪ್ರಬಂಧ ಗ್ರಾಮ ಭಾರತದ ಅನನ್ಯತೆಯನ್ನು ನವಿರಾಗಿ ಚಿತ್ರಿಸಿದೆ.

**ಎಚ್. ಆನಂದ್‌ಕುಮಾರ್, ಚಿತ್ರದುರ್ಗ,**
**ಬಾರಿಕೇರಿ ಕರಿಯಪ್ಪ, ದಾವಣಗೆರೆ**

'ಹಾರಿ ಮಿಂಚುವ ಕನಸು' (ಗೋಪೀನಾಥ ರಾವ್) ಕತೆ ಅಪರೂಪದ ಕಥಾವಸ್ತು, ಸಾಂಕೇತಿಕ ನಿರೂಪಣೆಯಿಂದ ಗಮನ ಸೆಳೆಯಿತು. ಒಂದೆಡೆ ಹಕ್ಕಿಯ ಮೇಲಿನ ಕ್ರೌರ್ಯ, ಇನ್ನೊಂದೆಡೆ ಅಬ್ದುಲ್ಲನ ಮೇಲಿನ ಯಜಮಾನಿಕೆ ಸೊಗಸಾಗಿ ನಿರೂಪಿತವಾಗಿದೆ.

**ಸುಂದರ್, ಬೆಂಗಳೂರು**

'ದಿ ಗುಡ್ ದಿ ಬ್ಯಾಡ್ ಅ್ಯಂಡ್ ದಿ ಅಗ್ಲಿ' ಸಿನಿಮಾ ವಿಶ್ಲೇಷಣೆ (ವಸುಧೇಂದ್ರ) ಚೆನ್ನಾಗಿದೆ. ಓದುತ್ತ ಹೋದಂತೆ ಸಿನಿಮಾ ನೋಡುವ ಬಯಕೆ ಉಂಟಾಯಿತು.

**ಬಿ. ಮನೋಹರ, ಚಳ್ಳಕೆರೆ**

'ಪ್ರಚಾರ ಪ್ರಿಯರು' (ಸುಮಾ ಕಳಸಾಪುರ) ಲಘು ಬರಹ ಸ್ವಾರಸ್ಯಕರವಾಗಿದೆ. ಇಂದಿನ ಒತ್ತಡದ ಜೀವನಶೈಲಿಯಲ್ಲಿ ಇಂತಹ ನವಿರಾದ ಹಾಸ್ಯ ಬರಹಗಳು ಬೇಕು.

**ಬಸವರಾಜ ಹೂಗಾರ, ಶಿವನಗುತ್ತಿ**